Rotary

ರೋಟರಿ
# ಐಸಿರಿ
ಪರ್ಕಳ
ವಲಯ-4, ರೋ. ಜಿಲ್ಲೆ-3182

ನಮ್ಮ ನಡೆ... ಕೃಷಿಯ ಕಡೆ...

UNITE FOR GOOD


Rtn. Francesco Arezzo
R.I. President


Rtn. K. Palaksha
District Governor


# ಐಶ್ವರ್ಯ

ಸಂಪುಟ: 4 ಸಾಪ್ತಾಹಿಕ ಸಂಚಿಕೆ : 15

ದಿನಾಂಕ: 14.10.2025



Rtn. Anil Kumar
President


Rtn. Krishnappa
Secretary

## ರೋಟರಿಜಿಲ್ಲೆ 3182 ವಲಯ ನಾಲ್ಕರ ಪುನರಾವಲೋಕನ ಸಭೆ






ರೋಟರಿ ಐಸಿರಿಯ ಪೂರ್ವಾಧ್ಯಕ್ಷೆ, ಪ್ರಸ್ತುತ ರೋಟರಿ ಜಿಲ್ಲೆ 3182, ವಲಯ 4ರ ವಲಯ ಸೇನಾನಿಯಾಗಿರುವ ರೊ. ಸ್ಮಿತಾ ಕಾಮತ್ ಆತಿಥ್ಯದಲ್ಲಿ, ರೋಟರಿ ಐಸಿರಿಯ ಆಶ್ರಯದಲ್ಲಿ ವಲಯ 4ರ ಪುನರಾವಲೋಕನ ಸಭೆ ನಡೆಯಿತು. ಅಕ್ಟೋಬರ್ 13 ರಂದು ಪರ್ಕಳ ಡೆಂಟಲ್ ಕ್ಲಿನಿಕ್ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ರೊ. ಅನಿಲ್ ಕುಮಾರ್ ವಹಿಸಿದ್ದರು.

ವಲಯದ ನೇತಾರ, ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ್ ಮುನ್ನಡೆಸಿದ, ಈ ಸಭೆಯಲ್ಲಿ ವಲಯದ ಎಲ್ಲಾ ಎಂಟೂ ಕ್ಲಬ್ ಗಳು – ರೋಟರಿ ಐಸಿರಿ, ರೋಟರಿ ಕಟಪಾಡಿ, ರೋಟರಿ ಮಣಿಪಾಲ, ರೋಟರಿ ಮಣಿಪಾಲ್ ಹಿಲ್ಸ್, ರೋಟರಿ ಮಣಿಪಾಲ್ ಟೌನ್, ರೋಟರಿ ಪರ್ಕಳ, ರೋಟರಿ ಉಡುಪಿ ಮತ್ತು ರೋಟರಿ ಉದ್ಯಾವರದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಭಾಗವಹಿಸಿದ್ದರು.

Zonal Learning Facilitator ರೊ. ಡಾ. ಎ. ಗಣೇಶ, ವಲಯ ಸೇನಾನಿಯವರಾದ ರೊ. ಸ್ಮಿತಾ ಕಾಮತ್, ರೊ. ಡಾ. ಶ್ರೀಧರ್, ರೊ. ಜನಾರ್ಧನ್ ಭಟ್, Zonal IT chairman ರೊ. ಪ್ರಶಾಂತ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. Past Asst. Governor ರೊ. ಡಾ. ಸುರೇಶ್ ಶೆಣೈಯವರು ಆಗಮಿಸಿ, ನವೆಂಬರ್ 2ರಂದು ನಡೆಯಲಿರುವ ಸಾಂಸ್ಕೃತಿಕ ಸಂಗಮದ ವಿವರ ನೀಡಿದರು.

ಈ ಸಭೆಯ ಆಯೋಜನೆಯಲ್ಲಿ ಸಹಕರಿಸಿದ ಕಾರ್ಯದರ್ಶಿ ರೊ. ಕೃಷ್ಣಪ್ಪ, ಪರ್ಕಳ ಡೆಂಟಲ್ ಕ್ಲಿನಿಕ್ ನ ರೊ. ಸ್ವಾತಿ ಪೈ, ದಂಡಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್, ರೊ. ರಾಜೇಶ್ ಡಿ. ಶೆಣೈ, ರೊ. ಸುನಿಲ್ ಕುಮಾರ್, ರೊ. ಗುರುಪ್ರಸಾದ್ ಕಾಮತ್, ರೊ. ನಾಗರಾಜ್ ಮತ್ತು ರೋಟರಿ ಐಸಿರಿ ಸದಸ್ಯರೆಲ್ಲರಿಗೂ ರೊ. ಸ್ಮಿತಾ ಕಾಮತ್ ರವರು ಹೃತ್ಪೂರ್ವಕವಾಗಿ ವಂದಿಸಿರುತ್ತಾರೆ.

ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸಿದ ರೊ. ಡಾ. ಎ. ಗಣೇಶ್, ಸಹಾಯಕ ಗವರ್ನರ್ ರಿಂದ ಅಭಿನಂದನೆ ಸ್ವೀಕರಿಸುತ್ತಿರುವ ರೊ. ಅನಿಲ್ ಕುಮಾರ್ ಮತ್ತು ರೊ. ಸ್ಮಿತಾ ಕಾಮತ್









## ಪ್ರೇರಣಾ ಸಿರಿ

**ನಾವು ಮತ್ತು ನಮ್ಮವರು ಹಾಳಾಗಲು ಕಾರಣ ಅವರು !**

– ರೊ. ಸುಕೇಶ್ ಕುಂದರ್

ನಾನು ಹಾಳಾಗಲು ಅವರು / ಇವರು ಕಾರಣ. ಇಲ್ಲದಿದ್ದರೆ ನನಗೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ನಾನು ಮಾಡಿದ ಸಹವಾಸ ದೋಷವೇ ಕಾರಣ. ಅಂತ ಹೇಳಿ ತನ್ನ ತಪ್ಪನ್ನು ಬೇರೆಯವರ ಮೇಲೆ ಹಾಕಿ ಕೊರಗುವವರು ಇದ್ದಾರೆ.

ತನ್ನ ಉದ್ದೇಶ ಗುರಿ ಕನಸು ಸಾಧಿಸಬೇಕೆಂಬ ಛಲದೊಂದಿಗೆ ನಾವು ಗಟ್ಟಿ ಮನಸ್ಸಿನಿಂದ ಇದ್ದರೆ, ಯಾರೂ ನಮ್ಮನ್ನು ಅವರು ತಪ್ಪು ದಾರಿಗೆ ಎಳೆಯಲು ಸಾಧ್ಯವಿಲ್ಲ. ಅದಕ್ಕಾಗಿ ನಾವು ಬೇರೆಯವರನ್ನು ಘೋಷಿಸುವುದು ತಪ್ಪು.

ಕೆಲವು ಮನೆಗಳಲ್ಲಿ ತಮ್ಮ ಮಕ್ಕಳು ದುಶ್ಚಟಗಳಿಗೆ ಬಲಿಯಾಗಲು ಅಥವಾ ಬೇರೆ ಅಡ್ಡದಾರಿ ಹಿಡಿಯಲು ಅವರ ಸ್ನೇಹಿತರು ಕಾರಣ – ನಮ್ಮ ಮಕ್ಕಳು ಅಂತವರಲ್ಲ, ಅವರಿವರ ಸಹವಾಸದಿಂದ ಇವರೂ ದಾರಿ ತಪ್ಪಿದರು ಅಂತ ದೂಷಿಸುವವರು ಹೆಚ್ಚು.

ನಾವು ನಮ್ಮ ಮಕ್ಕಳ ಜೊತೆ ಹೇಗಿರುತ್ತೇವೆ, ಅವರ ನಡೆವಳಿಕೆಗಳು ಹೇಗಿವೆ, ತಪ್ಪು ದಾರಿಯಲ್ಲಿ ನಡೆಯುವ ಮೊದಲೇ ಹೇಳಿ, ಪ್ರೀತಿಯಿಂದ ನೋಡಿಕೊಂಡು, ಅವರ ಜೊತೆಗೆ ಸ್ನೇಹಿತರಂತೆ ಇದ್ದರೆ, ಖಂಡಿತ ನಾವು ಮತ್ತು ನಮ್ಮವರು ಹಾಳಾಗಲು ಬೇರೆಯವರು ಕಾರಣರಾಗುವುದಿಲ್ಲ.

ನಮ್ಮವರು ಎಂದು ಕೊಂಡವರನ್ನು, ನಾವು ಅವರು ಮಾಡಿದ ತಪ್ಪುಗಳನ್ನು ತಪ್ಪು ಎಂದು ವಿವರಿಸಿ ಹೇಳುವುದರಿಂದ ಅವರು ಹಾಳಾಗುವುದು ತಪ್ಪುತ್ತದೆ. ಅಲ್ಲದೆ ನಾವು ಹಾಳಾಗುವುದಿಲ್ಲ. ನಮ್ಮವರೂ ಹಾಳಾಗುವುದಿಲ್ಲ.

## ಗೋ–ಆಧಾರಿತ ಸಮುದಾಯದ ಆರ್ಥಿಕತೆ:

ಗೋ–ಆಧಾರಿತ **ಆರ್ಥಿಕತೆಯು** ಒಂದು **ಸಮುದಾಯದ** ಆರ್ಥಿಕ ಮತ್ತು ಕೃಷಿ ಉನ್ನತಿಗೆ ಪರಸ್ಪರ ಪೂರಕವಾಗಿ ಬೆಸೆದುಕೊಂಡಿದ್ದು, ಹಸುಗಳು ಈ ವ್ಯವಸ್ಥೆಯ ಕೇಂದ್ರ ಬಿಂದುವಾಗಿದ್ದು, ಹಾಲು, ಗೊಬ್ಬರ ಮತ್ತು ಅನಿಲ ಶಕ್ತಿಯಂತಹ ಸಂಪನ್ಮೂಲಗಳನ್ನು ಒದಗಿಸುತ್ತದೆ. ಈ ಮಾದರಿಯು ಆಹಾರ, ಸಾವಯವ ಗೊಬ್ಬರ, ಇಂಧನ ಮತ್ತು ಔಷಧಕ್ಕಾಗಿ ಹಸುಗಳ ಉತ್ಪನ್ನಗಳನ್ನು ಅವಲಂಬಿಸಿದೆ. ಸಾಂಪ್ರದಾಯಿಕವಾಗಿ ಕೃಷಿ ಮತ್ತು ಸಾಗಣೆಗೆ ಎತ್ತುಗಳನ್ನು ಬಳಸುತ್ತದೆ. ಆಧುನಿಕ ಸನ್ನಿವೇಶದಲ್ಲಿ, ಇದು ಯಾಂತ್ರೀಕೃತ ಕೃಷಿಗೆ ಸುಸ್ಥಿರ ಪರ್ಯಾಯವಾಗಬಹುದು ಮತ್ತು ಗೋ–ಆಧಾರಿತ ಉತ್ಪನ್ನಗಳಿಗೆ ದಕ್ಷತೆ ಮತ್ತು ಮಾರುಕಟ್ಟೆಯನ್ನು ಸುಧಾರಿಸಲು ತಂತ್ರಜ್ಞಾನದೊಂದಿಗೆ ಸಂಯೋಜನೆ ಮಾಡಲಾಗುತ್ತಿದೆ.

ಹಸುಗಳು ಹಾಲಿನ ಪ್ರಾಥಮಿಕ ಮೂಲವಾಗಿದ್ದು, ಹಾಲು ಮತ್ತದರ ಉಪ ಉತ್ಪನ್ನಗಳು, ಗಮನಾರ್ಹವಾದ ಡೈರಿ ಮಾರುಕಟ್ಟೆಯನ್ನು ಹೊಂದಿರುವ ಪ್ರಮುಖ ಆಹಾರ ಉತ್ಪನ್ನವಾಗಿದೆ.

ತುಪ್ಪ ಮತ್ತು ಮೊಸರಿನಂತಹ ಉತ್ಪನ್ನಗಳನ್ನು ಆಯುರ್ವೇದ ಮತ್ತು ಇತರ ಸಾಂಪ್ರದಾಯಿಕ ಪರಿಹಾರಗಳಲ್ಲಿ ಬಳಸಲಾಗುತ್ತದೆ.

ಹಸುವಿನ ಸಗಣಿ ಸಮೃದ್ಧವಾದ ಸಾವಯವ ಗೊಬ್ಬರವಾಗಿದ್ದು ಅದು ಮಣ್ಣಿನ ಆರೋಗ್ಯವನ್ನು ಸುಧಾರಿಸುತ್ತದೆ ಮತ್ತು ರಾಸಾಯನಿಕ ಪರ್ಯಾಯಗಳ ಅಗತ್ಯವನ್ನು ಕಡಿಮೆ ಮಾಡುತ್ತದೆ.

ಎತ್ತುಗಳನ್ನು ಹೊಲಗಳನ್ನು ಉಳುಮೆ ಮಾಡಲು ಮತ್ತು ಬಂಡಿಗಳನ್ನು ಎಳೆಯಲು ಬಳಸಲಾಗುತ್ತದೆ, ಇದು ದುಬಾರಿ ಯಂತ್ರೋಪಕರಣಗಳ ಅಗತ್ಯವನ್ನು ಕಡಿಮೆ ಮಾಡುವ ಪಾತ್ರವಾಗಿದೆ.

ಗೋಮೂತ್ರವನ್ನು ನೈಸರ್ಗಿಕ ಕೀಟನಾಶಕವಾಗಿ ಬಳಸಬಹುದು.

ಹಸುವಿನ ಸಗಣಿ ಅಡುಗೆ ಮತ್ತು ಬಿಸಿಮಾಡಲು ಇಂಧನವಾಗಿ ಬಳಸಲಾಗುತ್ತದೆ, ಮತ್ತು ತಾಪಮಾನ ನಿಯಂತ್ರಣಕ್ಕಾಗಿ ಗೋಡೆಗಳನ್ನು ಪ್ಲಾಸ್ಟರ್ ಮಾಡಲು ಸಹ ಬಳಸಬಹುದು !

ಹಾಲು, ಸಗಣಿ, ಮೂತ್ರ, ಮೊಸರು ಮತ್ತು ತುಪ್ಪ ಎಂಬ ಐದು ಉತ್ಪನ್ನಗಳ ಮಿಶ್ರಣವನ್ನು ಪಂಚಗವ್ಯ ಎಂದು ಕರೆಯಲಾಗುತ್ತದೆ, ಇದನ್ನು ವಿವಿಧ ಸಾಂಪ್ರದಾಯಿಕ ಪದ್ಧತಿಗಳಲ್ಲಿ ಬಳಸಲಾಗುತ್ತದೆ.

### ಪ್ರಕಟಣೆ

ಆತ್ಮೀಯ ರೋಟರಿ ಸದಸ್ಯರೇ, ಈ ರೋಟರಿ ವರ್ಷದಲ್ಲಿ ನೀವು ಪೌಲ್ ಹ್ಯಾರಿಸ್ ಸೊಸೈಟಿ ಸದಸ್ಯತನ ಪಡೆಯುವವರಿದ್ದರೆ, ಅಥವಾ ಮೇಜರ್ ಡೋನರ್ ದೇಣಿಗೆ ಕಳಿಸುವವರಿದ್ದರೆ, ಅಥವಾ PHF ಆಗುವವರಿದ್ದರೆ, ಅಥವಾ USD100 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆಯನ್ನು TRF ಗೆ ನೀಡುವವರಿದ್ದರೆ ದಯವಿಟ್ಟು 13/10/2025 ಒಳಗೆ ಅಧ್ಯಕ್ಷ / ಕಾರ್ಯದರ್ಶಿಯವರಿಗೆ ಮಾಹಿತಿ ನೀಡಿ. ಈ ಸದಸ್ಯರನ್ನು ವಲಯದ TRF ಸೆಮಿನಾರ್ ನಲ್ಲಿ ಗುರುತಿಸಲಾಗುವುದು. ಧನ್ಯವಾದಗಳು.

ರೊ. ಸ್ಮಿತಾ ಜಿ ಕಾಮತ್
ವಲಯ ಸೇನಾನಿ

## ಬೌದ್ಧಿಕ ಸಿರಿ  ಯಶಸ್ಸಿನ ಗುಟ್ಟು

ಆ ಶಿಷ್ಯ ತನ್ನ ಗುರುವಿನ ಬಳಿ, ತನಗೆ ಯಶಸ್ಸಿನ ಗುಟ್ಟನ್ನು ಭೋಧನೆ ಮಾಡಬೇಕೆಂದು ಸದಾ ದುಂಬಾಲು ಬೀಳುತ್ತಿದ್ದ. ಗುರು ಒಂದು ಸೂಕ್ತ ಸಂಧರ್ಭಕ್ಕಾಗಿ ಕಾಯುತ್ತಾ ತನ್ನ ಶಿಷ್ಯನ ಹಂಬಲವನ್ನು ಇನ್ನಷ್ಟು ತೀವ್ರವಾಗಿಸುತ್ತಿದ್ದ.

ಒಂದು ದಿನ ಇಬ್ಬರು ಕೆರೆ ದಂಡೆಯಲ್ಲಿರುವಾಗ, ಶಿಷ್ಯ ಪುನಃ ಅದೇ ಪ್ರಶ್ನೆಯನ್ನು ಗುರುವಿಗೆ ಕೇಳಿದ. ಇದೇ ಸೂಕ್ತ ಸಂದರ್ಭವೆಂದು ಗ್ರಹಿಸಿದ ಗುರುವು ಶಿಷ್ಯನನ್ನು ಕೆರೆನೀರಿನಲ್ಲಿ ಸ್ವಲ್ಪ ದೂರ ಎಳೆದುಕೊಂಡು ಹೋಗಿ, ಒಮ್ಮೆಲೇ ಶಿಷ್ಯನ ತಲೆಯನ್ನು ನೀರಿನಲ್ಲಿ ಮುಳುಗಿಸಿ ಗಟ್ಟಿಯಾಗಿ ಹಿಡಿಕೊಂಡು ಬಿಟ್ಟ.

ಶಿಷ್ಯನಿಗೆ ಗಾಳಿಯೇ ಸಿಗದಂತಾಗಿ ಉಸಿರುಗಟ್ಟಲು ಆರಂಭವಾಗಿತ್ತು. ಗಾಳಿಗಾಗಿ ತೀವ್ರವಾಗಿ ತಿಣುಕಾಡಿದನು. ಗುರುವಿನ ಹಿಡಿದ ಸಡಿಲುಗೊಳ್ಳುವ ಲಕ್ಷಣ ಕಾಣದಿದ್ದಾಗ, ಇನ್ನಷ್ಟು ಗಾಬರಿಯಾಗಿ, ಗಾಳಿ ಸಿಗದೇ ಹೋದರೆ ತಾನು ಸತ್ತೇ ಹೋಗುತ್ತೇನೆ, ಗಾಳಿ ... ಗಾಳಿ ಎಂದು ಕೂಗಲು ಪ್ರಯತ್ನಿಸಿದ. **ಗಾಳಿ ಸಿಗದಿದ್ದರೆ ಇನ್ನೇನು ಸತ್ತೇ ಹೋಗುತ್ತೇನೆ** ಎಂದು ಕೊಂಡಾಗ ಗುರುವು ಶಿಷ್ಯನ ತಲೆಯನ್ನು ಮೇಲಕ್ಕೆತ್ತಿದನು.

ಗುರುವಿನ ನಡೆಯ ಬಗ್ಗೆ ಶಿಷ್ಯನು ಕೋಪಗೊಳ್ಳುತ್ತಿದ್ದಂತೆ, ಗುರು ಕೇಳಿದ "ನೀರಿನಲ್ಲಿ ಮುಳುಗಿದ್ದಾಗ ನೀನು ಏನನ್ನು ಹಂಬಲಿಸುತ್ತಿದ್ದೆ ?", "ಉಸಿರಾಡಲು ಗಾಳಿ" ಎಂದು ಶಿಷ್ಯ ಉತ್ತರಿಸಿದ. ಏಕೆ ಎಂದು ಗುರು ಕೇಳಿದಾಗ, ಶಿಷ್ಯನೆಂದನು, "ನನಗೆ ಗಾಳಿ ಬೇಕೇ ಬೇಕಿತ್ತು, ಗಾಳಿ ಸಿಗದೇ ಹೋಗಿದ್ದರೆ, ನಾನು ಬದುಕಲಾರನಾಗಿದ್ದೆ.... ಆದರೆ, ತಾನು ತಮ್ಮಲ್ಲಿ ಯಶಸ್ಸಿನ ಗುಟ್ಟು ಏನೆಂದು ಕೇಳಿದ್ದೆ" ಎಂದಾಗ, ಗುರು ಹೇಳಿದರು "ಅದೇ ಯಶಸ್ಸಿನ ಗುಟ್ಟು"..!

ನಾವು ಏನನ್ನು ಬಯಸುತ್ತೇವೋ, ಅದು ಬೇಕೇಬೇಕೆನ್ನುವ ಹಂಬಲ ತೀವ್ರವಾದಾಗ, ಅದು ಇಲ್ಲದೇ ಬದುಕಲು ಸಾಧ್ಯವೇ ಇಲ್ಲ ಎನ್ನುವಷ್ಟರಮಟ್ಟಿಗೆ ಅದರ ಬಯಕೆ ಜಾಸ್ತಿಯಾದಾಗ ಅದಕ್ಕೆನ್ನುತ್ತೇವೆ "ಬರ್ನಿಂಗ್ ಡಿಸೈರ್".

ಈ ಬರ್ನಿಂಗ್ ಡಿಸೈರ್ ಇದ್ದರೇನೇ ಸ್ಪಷ್ಟ ಗುರಿಯನ್ನು ಹೊಂದಲು ಸಾಧ್ಯ, ಗುರಿ ಸಾಧಿಸಲು ಕೆಲಸಮಾಡಲು ಇದುವೇ ಪ್ರೇರಣೆ, ಹಿನ್ನಡೆ, ಅಡಚಣೆ, ಪ್ರತಿಕೂಲ ಪರಿಸ್ಥಿತಿ ಬಂದರೂ, ತಾನು ಪರಿಶ್ರಮ ಪಡುವುದಕ್ಕೆ ದೃಢಸಂಕಲ್ಪ ಮಾಡುತ್ತಾನೆ. ಈ ರೀತಿಯ ಪ್ರಯತ್ನಗಳು ಫಲ ನೀಡುತ್ತವೆ. ಹಾಗಾಗಿ ಬರ್ನಿಂಗ್ ಡಿಸೈರ್ – ಯಶಸ್ಸಿನ ಹಿಂದಿನ ನಿಜವಾದ ರಹಸ್ಯ ಎನ್ನುತ್ತಾನೆ.

## ಅಕ್ಟೋಬರ್ 07 ರ ಸಭೆಯ ಝಲಕ್























22/9/2025 ರಂದು ಶಿವಪ್ರೇರಣಾ ಚಾರಿಟಬಲ್ ಟ್ರಸ್ಟ್ ಮತ್ತು ಕಲ್ಲಚ್ಚು ಪ್ರಕಾಶನದ ವತಿಯಿಂದ ಸರಳೇಬೆಟ್ಟಿನ "ರತ್ನಸಂಜೀವ" ದಲ್ಲಿ ನಡೆದ "ನವರಸಗಳಲ್ಲಿ ನವರಾತ್ರಿ" ಕವಿಗೋಷ್ಠಿ ಕಾರ್ಯಕ್ರಮದಲ್ಲಿ ರೊ. ಸ್ಮಿತಾ ಕಾಮತ್ ಮತ್ತು ನಮ್ಮ ಸದಸ್ಯರಂತೆ ಇರುವ ಶ್ರೀಯುತ ನಟರಾಜ ಪರ್ಕಳ ಅವರನ್ನು ಅವರು ಸಾಹಿತ್ಯಕ್ಕೆ ನೀಡಿದ ಕೊಡುಗೆಗಾಗಿ ಸನ್ಮಾನಿಸಲಾಯಿತು. 07/10/2025 ರ ಸಭೆಯಲ್ಲಿ ಉಪಸ್ಥಿತರಿದ್ದ ಈರ್ವರನ್ನೂ ಅಧ್ಯಕ್ಷರು ಗೌರವಿಸಿದರು.



## ಕಾರ್ಯದರ್ಶಿಯವರ ವರದಿ

ರೋಟರಿ ಐಸಿರಿಯ 14ನೇ ವಾರದ ಸಭೆ 7/10/2025 ರಂದು RCC ಕಾರ್ಯಾಲಯದಲ್ಲಿ ಜರುಗಿತು. ದಂಡಾಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್ ಅಧ್ಯಕ್ಷರಿಗೆ ಕೊರಳ ಲಾಂಛನ ತೊಡಿಸಿ ಅಧ್ಯಕ್ಷರು ಸಭೆಯನ್ನು ಆರಂಭಿಸಿದರು.

ರೊ. ಡಾ. ಎ. ಗಣೇಶ್ ಪ್ರಾರ್ಥನೆ ನಡೆಸಿದರು. ಅಧ್ಯಕ್ಷರಾದ ರೊ. ಅನಿಲ್ ಕುಮಾರ್ ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ವಾರದ ವರದಿಯನ್ನು ಮಂಡಿಸಿದರು.

ವಾರದ ಬುಲೆಟಿನ್ ಐಶ್ವರ್ಯವನ್ನು ರೊ. ಪಾಂಡುರಂಗ ಲಾಗ್ವಾಂಕರ್ ಬಿಡುಗಡೆ ಮಾಡಿದರು. ಸಂಪಾದಕರಾದ ರೊ. ರಾಜೇಶ್ ಡಿ ಶೆಣೈ ಅವರು ಸಹಕರಿಸಿದರು. ರೊ. ರಾಜೇಶ್ ಶೆಣೈ ಅವರು ಸಂಚಿಕೆಗೆ ಲೇಖನ ನೀಡಿದ ರೊ. ಸುಕೇಶ್ ಕುಂದರ್ ಅವರನ್ನು ಅಭಿನಂದಿಸಿದರು.

ರೊ. ಡಾ. ಎ. ಗಣೇಶ್ ಅವರು ಸೆಪ್ಟೆಂಬರ್ ತಿಂಗಳ ಆಯವ್ಯಯವನ್ನು ಮಂಡಿಸಿದರು. ಅಲ್ಲದೆ ಈ ತಿಂಗಳಲ್ಲೇ ನಡೆಯಲಿರುವ ಹಲವಾರು ವಲಯ ಮತ್ತು ಜಿಲ್ಲಾ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ರೊ. ಸುಕೇಶ್ ಕುಂದರ್ ಅವರು cultural competition ನ ಪೂರ್ವ ತಯಾರಿಯ ಬಗ್ಗೆ ಮಾಹಿತಿ ನೀಡಿದರು. ಸದಸ್ಯರ ಅವಕಾಶದಲ್ಲಿ ರೊ. ಸುದರ್ಶನ್ ಪೈ, ರೊ. ಮಂಜುನಾಥ್ ಉಪಾಧ್ಯ, ರೊ. ಗುರುಪ್ರಸಾದ್ ಕಾಮತ್, ರೊ. ಕೃಷ್ಣಪ್ಪ ಸಲಹೆಗಳನ್ನು ನೀಡಿದರು.

ರೊ. ಸ್ಮಿತಾ ಕಾಮತ್ ಅವರು ತಮ್ಮ ಆತಿಥ್ಯದಲ್ಲಿ ನಡೆಯಲಿರುವ ವಲಯ ಪುನರಾವಲೋಕನ ಸಭೆ ಬಗ್ಗೆ ಮಾಹಿತಿ ನೀಡಿದರು.

ರೋಟರಿ ಐಸಿರಿಯ ಆಪ್ತರಾದ ಶ್ರೀ ನಟರಾಜ್ ಇವರು ತಮ್ಮ ಮಗಳ ವಿವಾಹ ಸಮಾರಂಭ ಮತ್ತು ತಮ್ಮ ಪುಸ್ತಕ ಬಿಡುಗಡೆ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆ ನೀಡಿದರು. ಈ ಸಂದರ್ಭದಲ್ಲಿ ಶ್ರೀ ನಟರಾಜ್ ಅವರನ್ನು ಹಾಗೂ ರೊ. ಸ್ಮಿತಾ ಕಾಮತ್ ಅವರನ್ನು ಸಾಹಿತ್ಯ ಸೇವೆಗಾಗಿ ಅಧ್ಯಕ್ಷರು ಗುರುತಿಸಿದರು.

ರೊ. ಎ ಗಣೇಶ್ ಹಾಗೂ ರೊ. ಲಾಗ್ವಾಂಕರ್ ಅವರನ್ನು ಜನ್ಮದಿನದ ಶುಭಾಶಯಗಳನ್ನು ನೀಡಿ ಗುರುತಿಸಲಾಯಿತು.

ಶ್ರೀ ನಟರಾಜ್ ಅವರು ಅದೃಷ್ಟಶಾಲಿ ರೋಟರಿಯನ್ ಆಯ್ಕೆ ಮಾಡಿ ರೊ. ಗೀತಾಶ್ರೀ ಉಪಾಧ್ಯ ಅವರು ಅದೃಷ್ಟಶಾಲಿ ರೋಟರಿಯನ್ ಆಗಿ ಆಯ್ಕೆಗೊಂಡರು.

ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ಧನ್ಯವಾದ ಸಮರ್ಪಿಸಿದರು. ದಂಡಾಪಾಣಿ ಕೊರಳ ಲಾಂಛನ ತೆಗೆದು ಅಧ್ಯಕ್ಷರು ಸಭೆಯನ್ನು ಮುಂದೂಡಿದರು. ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

## "ಐಶ್ವರ್ಯ" 14 ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕ ಸಂಚಿಕೆಯ **ಹದಿನಾಲ್ಕನೇ** ಆವೃತ್ತಿಯನ್ನು ರೋಟರಿ ಐಸಿರಿಯ ಅಂತಾರಾಷ್ಟ್ರೀಯ ಸೇವಾ (TRF) ವಿಭಾಗದ Rtn. PHF. ಪಾಂಡುರಂಗ ಲಾಗ್ವಂಕರ್ ರವರು 07/10/2025 ರಂದು ಬಿಡುಗಡೆಗೊಳಿಸಿದರು.



ರೋಟರಿ ಐಸಿರಿಯ **ಹದಿನಾಲ್ಕನೇ** ವಾರದ ಸಭೆಯಲ್ಲಿ ಅದೃಷ್ಟಶಾಲಿ ರೊಟೇರಿಯನ್ ಆಯ್ಕೆಯನ್ನು ಅತಿಥಿಯಾಗಿ ಆಗಮಿಸಿದ್ದ ಶ್ರೀ ನಟರಾಜ ಪರ್ಕಳ ನಡೆಸಿದರು ಮತ್ತು ರೊ. ಗೀತಾಶ್ರೀ ಎಂ. ಉಪಾಧ್ಯ ಅದೃಷ್ಟಶಾಲಿ ರೋಟರಿಯನ್ ಆಗಿ ಆಯ್ಕೆಯಾದರು.



ರೋಟರಿ ಐಸಿರಿ 07/10/2025ರ ವಾರದ ಸಭೆಯಲ್ಲಿ ಮಾತನಾಡಿದ ಅತಿಥಿ, ಶ್ರೀ ನಟರಾಜ ಪರ್ಕಳ.